## ಈ ವರ್ಷದ ಜಾತ್ರೆಯ ವೈಶಿಷ್ಟ್ಯತೆಗಳು

* ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ನೂತನ ರಥದ ಸಮರ್ಪಣೆ
* ಶ್ರೀಕ್ಷೇತ್ರದಲ್ಲಿ ಗೋಶಾಲೆ ಉದ್ಘಾಟನೆ
* ರೈತ ಉತ್ಪಾದನಾ ಕಂಪನಿಗಳು–ಅವಕಾಶಗಳು ಮತ್ತು ಸವಾಲುಗಳು – ವಿಚಾರಸಂಕಿರಣ
* ಬೀಜ ಸಂಸ್ಕರಣ ಘಟಕದ ಉದ್ಘಾಟನೆ
* ದ್ವಿದಳ ಧಾನ್ಯಗಳ ಅಪೂರ್ವ ಲೋಕ ಕೃತಿ ಲೋಕಾರ್ಪಣೆ
* ಸುತ್ತೂರಿನಲ್ಲಿ ಗರಡಿಮನೆ ಉದ್ಘಾಟನೆ

## ಜಾತ್ರಾ ಮಹೋತ್ಸವದ ವೈಶಿಷ್ಟ್ಯಗಳು

ಶ್ರೀಮಠದ ಸಂಸ್ಥಾಪಕರಾದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಪ್ರತಿ ವರ್ಷದ ಪುಷ್ಯ ಬಹುಳ ದ್ವಾದಶಿಯಂದು ಆರಂಭಗೊಂಡು ಆರು ದಿನಗಳ ಕಾಲ ಜರುಗುತ್ತದೆ. ಪ್ರತಿನಿತ್ಯ ಕರ್ತೃಗದ್ದುಗೆಗೆ ಹಾಗೂ ಕ್ಷೇತ್ರದಲ್ಲಿರುವ ಇತರೆ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಉತ್ಸವಗಳಿರುತ್ತವೆ. ಪ್ರತಿನಿತ್ಯ ಲಕ್ಷಾಂತರ ಭಕ್ತರು ಇದರಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಭಕ್ತಾದಿಗಳಿಗೆ ಬೆಳಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ವೇಳೆ ಪ್ರಸಾದದ ವ್ಯವಸ್ಥೆ ಮಾಡಲಾಗುತ್ತದೆ. ಸಾರಿಗೆ ಮತ್ತು ವಸತಿ ವ್ಯವಸ್ಥೆ ಸಹ ಮಾಡಲಾಗಿರುತ್ತದೆ.

* ಪ್ರತಿದಿನ ಒಂದೊಂದು ಊರಿನಲ್ಲಿ ಸ್ನೇಹ–ಸೌಹಾರ್ದ ಶಾಂತಿ ಪ್ರಾರ್ಥನಾ ಪಥಸಂಚಲನವಿರುತ್ತದೆ. ಜೊತೆಗೆ ಸ್ವಾಮೀಜಿಯವರಿಂದ ಧರ್ಮಸಂದೇಶ ಕಾರ್ಯಕ್ರಮವಿರುತ್ತದೆ
* ರಥೋತ್ಸವ, ಕೊಂಡೋತ್ಸವ, ಮುತ್ತಿನ ಪಲ್ಲಕ್ಕಿ ಉತ್ಸವ, ತೆಪ್ಪೋತ್ಸವ, ಲಕ್ಷ ದೀಪೋತ್ಸವ
* ಶಾಲಾ ಕಾಲೇಜು ಮಕ್ಕಳ ಪ್ರತಿಭಾ ವಿಕಾಸಕ್ಕಾಗಿ ಸಾಂಸ್ಕೃತಿಕ ಮೇಳವಿರುತ್ತದೆ
* ರಂಗೋಲಿ ಸ್ಪರ್ಧೆ
* ಸೋಬಾನೆ ಪದ ಸ್ಪರ್ಧೆ
* ಭಜನಾ ಸ್ಪರ್ಧೆ
* ಕುಸ್ತಿ ಪಂದ್ಯಾವಳಿ
* ಚಿತ್ರಕಲಾ ಸ್ಪರ್ಧೆ
* ಗಾಳಿಪಟ ಸ್ಪರ್ಧೆ
* ದೇಸಿ ಆಟಗಳ ಸ್ಪರ್ಧೆ
* ರಸಪ್ರಶ್ನೆ ಸ್ಪರ್ಧೆ
* ವಸ್ತುಪ್ರದರ್ಶನ ಮತ್ತು ಕೃಷಿ ಮೇಳ
* ಕೃಷಿ ವಿಚಾರಸಂಕಿರಣ
* ಉಚಿತ ಸಾಮೂಹಿಕ ವಿವಾಹ
* ದನಗಳ ಜಾತ್ರೆ
* ಧಾರ್ಮಿಕ ಸಭೆ
* ನಾದಸ್ವರ, ಭಕ್ತಿಸಂಗೀತ, ಯೋಗ, ಜನಪದ ಝೇಂಕಾರ, ಭರತನಾಟ್ಯ, ರೂಪಕಗಳು ಹಾಗೂ ನಾಟಕಗಳ ವ್ಯವಸ್ಥೆ ಮಾಡಲಾಗಿದೆ

... 4

| | | |
|---|---|---|
| ಜೆಎಸ್ಎಸ್ ಮಹಾವಿದ್ಯಾಪೀಠ | : | ಶ್ರೀಮಠದ 23ನೆಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 1940ರಲ್ಲಿಯೇ ಬಡ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದ್ದರು.<br><br>1954ರಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠವನ್ನು ಸ್ಥಾಪಿಸುವುದರ ಮೂಲಕ ಶೈಕ್ಷಣಿಕ ಸೇವೆಯನ್ನು ಆರಂಭಿಸಿದರು. ಪ್ರಸ್ತುತ ಮಹಾವಿದ್ಯಾಪೀಠದ ಆಶ್ರಯದಲ್ಲಿ ದೇಶ–ವಿದೇಶಗಳಲ್ಲಿ 350ಕ್ಕೂ ಹೆಚ್ಚಿನ ಸಂಸ್ಥೆಗಳು ಸೇವೆ ಸಲ್ಲಿಸುತ್ತಿವೆ. |
| ವಿದ್ಯಾರ್ಥಿಗಳ ಸಂಖ್ಯೆ | : | ಸಂಸ್ಥೆಯು ನಡೆಸುತ್ತಿರುವ ವಿವಿಧ ವಿದ್ಯಾಸಂಸ್ಥೆಗಳಲ್ಲಿ ಸು. ಒಂದು ಲಕ್ಷ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. |
| ನೌಕರರ ಸಂಖ್ಯೆ | : | ವಿದ್ಯಾಪೀಠದ ಆಶ್ರಯದ ವಿವಿಧ ಸಂಸ್ಥೆಗಳಲ್ಲಿ ಸುಮಾರು 15,000 ನೌಕರರು ಸೇವೆ ಸಲ್ಲಿಸುತ್ತಿದ್ದಾರೆ. |

## ಶ್ರೀಮಠದ ಕಾರ್ಯಕ್ರಮಗಳು

* ಪ್ರತಿನಿತ್ಯ ಪೂಜಾಕಾರ್ಯಗಳು
* ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ
* ಯುಗಾದಿ ಹಬ್ಬದಂದು ಪಂಚಾಂಗ ಪಠಣ ಮತ್ತು ಶ್ರವಣ
* ಶಿವದೀಪೋತ್ಸವ
* ಧನುರ್ಮಾಸದಲ್ಲಿ ವಿಶೇಷ ಪೂಜೆ
* ಕಾರ್ತಿಕ ಮಾಸದಲ್ಲಿ ವಿಶೇಷ ಪೂಜೆ..ಇತ್ಯಾದಿ

... 3

**ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ**

**13–18 ಜನವರಿ 2018 * ಸುತ್ತೂರು ಶ್ರೀಕ್ಷೇತ್ರ**

**ಪಕ್ಷಿನೋಟ**

| | | |
|---|---|---|
| ಶ್ರೀಮಠದ ಸಂಸ್ಥಾಪಕರು | : | ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು |
| ಕಾಲಮಾನ | : | 10ನೇ ಶತಮಾನ |
| ಗುರುಪರಂಪರೆ | : | 24 ಜಗದ್ಗುರುಗಳು |
| ಗುರುಪರಂಪರೆಯ ಪ್ರಮುಖ ಜಗದ್ಗುರುಗಳು | : | ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು<br><br>ಜಗದ್ಗುರು ಶ್ರೀ ಘನಲಿಂಗದೇವರು (ಶ್ರೀ ತೋಂಟದ ಸಿದ್ಧಲಿಂಗಯತಿಗಳ ಸಮಕಾಲೀನರು)<br><br>ಜಗದ್ಗುರು ಮಂತ್ರಮಹರ್ಷಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು<br><br>ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು |
| ಇಂದಿನ ಪೀಠಾಧ್ಯಕ್ಷರು | : | ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು |
| ಸೇವಾಕಾರ್ಯ | : | ಶತಶತಮಾನಗಳಿಂದ ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೈಂಕರ್ಯ ನಡೆಸುತ್ತಾ ಬರಲಾಗಿದೆ. |
| ವಿಶೇಷ ಉಲ್ಲೇಖ | : | ಶ್ರೀ ಮಲೆಯ ಮಹದೇಶ್ವರರು ಶ್ರೀಮಠಕ್ಕೆ ಆಗಮಿಸಿ ರಾಗಿಬೀಸುವ ಕಾಯಕ ಕೈಗೊಂಡಿದ್ದರು. |

... 2